**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 47 (79) |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13.12.2021 |
| ಉತ್ತರಿಸುವವರು | : | ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಎಂದರೇನು; ಇವುಗಳಲ್ಲಿರುವ ವಿಧಗಳು ಎಷ್ಟು; ಅವು ಯಾವುವು; ರಾಜ್ಯದಲ್ಲಿರುವ ಅರಣ್ಯಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾಗಿ ಜಿಲ್ಲಾವಾರು ಮಾಹಿತಿ ನೀಡುವುದು) | ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು WP No. 202/95 ರಲ್ಲಿ ನೀಡಿರುವ ತೀರ್ಪಿನ ಪ್ರಕಾರ ಅರಣ್ಯವೆಂದರೆ ಶಬ್ದಕೋಶದಲ್ಲಿ ವಿವರಿಸಿರುವಂತೆ ಇರುವ ಪ್ರದೇಶ ಮತ್ತು ಶಾಸನಬದ್ಧವಾಗಿ ಘೋಷಿಸಿದ ಎಲ್ಲಾ ಅರಣ್ಯ ಪ್ರದೇಶಗಳು ಹಾಗೂ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ಮಾಲೀಕತ್ವವನ್ನು ಪರಿಗಣಿಸದೇ **"ಅರಣ್ಯ"** ಎಂದು ದಾಖಲಿಸಲಾದ ಪ್ರದೇಶಗಳು. ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾದ ಪರಿಗಣಿತ ಅರಣ್ಯ ಪ್ರದೇಶಗಳು ಇದರೊಳಗೆ ಒಳಗೊಂಡಿರುತ್ತವೆ.<br>ರಾಜ್ಯದಲ್ಲಿ ಈ ಕೆಳಗಿನಂತೆ ಮೂರು ವಿಧದ ಅಧಿಸೂಚಿತ ಅರಣ್ಯ ಪ್ರದೇಶಗಳು ಇವೆ.<br>**1.** **"ಮೀಸಲು ಅರಣ್ಯ"** ಎಂದರೆ ಕರ್ನಾಟಕ ಅರಣ್ಯ ಅಧಿನಿಯಮ 1963ರ (II)ನೇ ಅಧ್ಯಾಯದ ಉಪ ಬಂಧಗಳಿಗೆ ಅನುಸಾರವಾಗಿ ಹಾಗೆಂದು ನಿರ್ಣಯಿಸಲಾದ ಮತ್ತು ಅಧಿಸೂಚಿಸಲಾದ ಯಾವುದೇ ಭೂಮಿ.<br>**2.** **"ಗ್ರಾಮ ಅರಣ್ಯ"** ಎಂದರೆ ಕರ್ನಾಟಕ ಅರಣ್ಯ ಅಧಿನಿಯಮ 1963ರ IIIನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಹಾಗೆ ಗ್ರಾಮದ ಅರಣ್ಯವೆಂಬುದಾಗಿ ಅಧಿಸೂಚಿಸಲಾದ ಯಾವುದೇ ಭೂಮಿ.<br>**3.** **"ರಕ್ಷಿತ ಅರಣ್ಯ"** ಎಂದರೆ ಕರ್ನಾಟಕ ಅರಣ್ಯ ಅಧಿನಿಯಮ 1963ರ IVನೇ ಅಧ್ಯಾಯದಂತೆ ಸರ್ಕಾರದ ವಶದಲ್ಲಿರುವ ಮತ್ತು ಕಾಲಂ 33(2)(ii)ರಂತೆ ಸರ್ಕಾರದ ವಿಶೇಷ ರಕ್ಷಣೆಯಲ್ಲಿರಿಸಲಾದ ಅಥವಾ ಕಾಲಂ 35ರಂತೆ ರಕ್ಷಿತ ಅರಣ್ಯವೆಂದು (ಕಿರು ಅರಣ್ಯ) ಘೋಷಿಸಲಾದ ಪ್ರದೇಶ. |
| ಆ) | ವನ್ಯಜೀವಿಗಳು ಎಂದರೇನು; ಅವು ಯಾವುವು; ಇವುಗಳಲ್ಲಿರುವ ವಿಧಗಳು ಎಷ್ಟು; ರಾಜ್ಯದಲ್ಲಿರುವ ವನ್ಯ ಜೀವಿಗಳನ್ನು ಯಾವ ರೀತಿ ವರ್ಗೀಕರಿಸಲಾಗಿದೆ; (ವಿವರವಾಗಿ ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸೆಕ್ಷನ್ 2 (37)ರ ಪ್ರಕಾರ ಯಾವುದೇ ಆವಾಸದ ಭಾಗವಾಗಿರುವ ಯಾವುದೇ ಪ್ರಾಣಿ ಜಲಸಸ್ಯ ಅಥವಾ ಭೂ ಸಸ್ಯವನ್ನು **"ವನ್ಯಜೀವಿ"** ಎಂದು ಕರೆಯಲಾಗುವುದು.<br>ವನ್ಯಜೀವಿಗಳಲ್ಲಿ ಸಸ್ತನಿಗಳು, ಪಕ್ಷಿಗಳು, ಸರಿಸೃಪಗಳು, ಉಭಯ ಜೀವಿಗಳು, ಮೀನು ಇತರೆ ಕಾರ್ಡೇಟಾಗಳು ಮತ್ತು ಅಕಶೇರುಕಗಳು ಅಲ್ಲದೇ ಅವುಗಳ ಮರಿಗಳನ್ನು ಮತ್ತು ಮೊಟ್ಟೆಗಳನ್ನು ಸಹ ಒಳಗೊಳ್ಳುತ್ತದೆ.<br>ವನ್ಯಜೀವಿಗಳನ್ನು ವನ್ಯಜೀವಿ (ಸಂರಕ್ಷಣಾ) ಅಧಿನಿಯಮ 1972ರ ಪ್ರಕಾರ ಶೆಡ್ಯೂಲ್ I ರಿಂದ IV ರಲ್ಲಿ ವರ್ಗೀಕರಿಸಲಾಗಿದ್ದು, ನಿರ್ದಿಷ್ಟವಾದ ವಿವರ ಕೆಳಕಂಡಂತಿದೆ.<br>**ಶೆಡ್ಯೂಲ್ -I**<br>• ಸಸ್ತನಿಗಳು (Mammals)<br>• ಉಭಯಚರಗಳು ಮತ್ತು ಸರೀಸೃಪಗಳು (Amphibians and Reptiles) |

<table>
<tr>
<td></td>
<td></td>
<td>
<ul>
<li>ಪಕ್ಷಿಗಳು (Birds)</li>
<li>ಕಠಿಣಚರ್ಮಿಗಳು ಮತ್ತು ಕೀಟಗಳು (Crustacea and Insects)</li>
</ul>
ಶೆಡ್ಯೂಲ್ –II<br>
ಮಂಗ, ಮುಳ್ಳುಹಂದಿ, ಮಕಾಕ್ಸ ಮತ್ತು ಕಾಡು ನಾಯಿ<br>
ಶೆಡ್ಯೂಲ್ –III<br>
ಜಿಂಕೆ ಮತ್ತು ಸಾರಂಗ<br>
ಶೆಡ್ಯೂಲ್ – IV<br>
ಮೊಲ, ಅಳಿಲು, ಉಳಿದ ಪಕ್ಷಿಗಳು ಮತ್ತು ಉಳಿದ ಹಾವುಗಳು
</td>
</tr>
<tr>
<td>ಇ)</td>
<td>ವನ್ಯಜೀವಿಗಳು ಇರುವ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ಬದಿಗಳಲ್ಲಿ ಇಲಾಖೆಯು ವನ್ಯಜೀವಿಗಳ ಸಂರಕ್ಷಣೆಗೆ ಕೈಗೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)</td>
<td>ವನ್ಯಪ್ರಾಣಿಗಳು ಇರುವ ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ಬದಿಗಳಲ್ಲಿ ಇಲಾಖೆಯು ವನ್ಯಪ್ರಾಣಿಗಳ ಸಂರಕ್ಷಣೆಗೆ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.
<ol>
<li>ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ಹೆದ್ದಾರಿಯ ಬದಿಗಳಲ್ಲಿ ವನ್ಯಜೀವಿಗಳ ಸಂರಕ್ಷಣೆ, ಚೈನ್ ಲಿಂಕ್ ಮೆಶ್, ದನ-ಕರು ತಡೆಯುವ ಕಂದಕ ನಿರ್ಮಾಣ/ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.</li>
<li>ರಾಷ್ಟ್ರೀಯ ಹೆದ್ದಾರಿಯ ಬದಿಗಳಲ್ಲಿ/ ತಿರುವುಗಳಲ್ಲಿ ನಿಧಾನವಾಗಿ ಚಲಿಸುವ ಮತ್ತು ಶಬ್ದರಹಿತ ವಾಹನ ಚಾಲನೆಯ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.</li>
<li>ರಾಷ್ಟ್ರೀಯ ಹೆದ್ದಾರಿ ಉದ್ದಕ್ಕೂ ವನ್ಯಪ್ರಾಣಿಗಳ ಚಲನ-ವಲನಗಳ ಮಾಹಿತಿಯನ್ನು ಆಧರಿಸಿ ನಾಮಫಲಕಗಳನ್ನು ಅಳವಡಿಸಲಾಗಿದೆ.</li>
<li>ವನ್ಯಪ್ರಾಣಿಗಳ ರಸ್ತೆ ಅಪಘಾತಗಳನ್ನು ತಡೆಯುವ ಮುನ್ಸೂಚನೆ ರೇಡಿಯಂ ಪ್ರತಿ ಫಲಕಗಳನ್ನು ಅಳವಡಿಸಿ ಪ್ರಾಣಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.</li>
<li>ವಾಹನಗಳು ವೇಗವಾಗಿ ಚಲಿಸದಂತೆ ತಡೆಯಲು ರಸ್ತೆ ತಡೆ / ಉಬ್ಬುಗಳನ್ನು ನಿರ್ಮಿಸಲಾಗಿದೆ.</li>
<li>ವನ್ಯಪ್ರಾಣಿಗಳು ಓಡಾಡುವ ಸ್ಥಳಗಳಲ್ಲಿ ಕ್ಯಾಮರಾ ಟ್ರಾಪ್ ನ್ನು ಅಳವಡಿಸಲಾಗಿರುತ್ತದೆ.</li>
<li>ಅಧಿಕಾರಿ / ಸಿಬ್ಬಂದಿಗಳು ರಾತ್ರಿ-ಹಗಲು ಗಸ್ತು ಸಂಚರಿಸಿ ವನ್ಯಜೀವಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.</li>
</ol>
</td>
</tr>
<tr>
<td>ಈ)</td>
<td>ದಿನಾಂಕ: 01.01.2021 ರಿಂದ ಇಲ್ಲಿಯವರೆಗೆ ರಸ್ತೆ ಅಪಘಾತದಲ್ಲಿ ಎಷ್ಟು ವನ್ಯಜೀವಿಗಳ ಮೃತಪಟ್ಟಿವೆ; ಅಪಘಾತವಾಗಲು ಕಾರಣಗಳೇನು; ಇದರಲ್ಲಿ ಇಲಾಖೆಯ ಜವಾಬ್ದಾರಿ ಏನು; (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ದಿನಾಂಕ: 01.01.2021 ರಿಂದ ನವೆಂಬರ್ ಮಾಹೆಯವರೆಗೆ) ರಸ್ತೆ ಅಪಘಾತದಲ್ಲಿ ಮೃತಪಟ್ಟ ವನ್ಯಪ್ರಾಣಿಗಳ ಸಂಖ್ಯೆ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ಜಿಲ್ಲೆ / ವಿಭಾಗ</th><th>ಸಂಖ್ಯೆ</th></tr>
<tr><td>1</td><td>ಮೈಸೂರು</td><td>01</td></tr>
<tr><td>2</td><td>ಮಂಡ್ಯ</td><td>01</td></tr>
<tr><td>3</td><td>ಶಿವಮೊಗ್ಗ</td><td>02</td></tr>
<tr><td>4</td><td>ಬಳ್ಳಾರಿ</td><td>03</td></tr>
<tr><td>5</td><td>ಉಡುಪಿ</td><td>03</td></tr>
<tr><td>6</td><td>ಚಿಕ್ಕಮಗಳೂರು</td><td>02</td></tr>
<tr><td>7</td><td>ಬೆಂಗಳೂರು (ಗ್ರಾ)</td><td>01</td></tr>
</table>
</td>
</tr>
</table>

<table>
<tr><td></td><td></td><td><table>
<tr><td>8</td><td>ಚಿಕ್ಕಬಳ್ಳಾಪುರ</td><td>09</td></tr>
<tr><td>9</td><td>ಕೋಲಾರ</td><td>02</td></tr>
<tr><td>10</td><td>ತುಮಕೂರು</td><td>07</td></tr>
<tr><td colspan="2">ಒಟ್ಟು</td><td>31</td></tr>
</table>
ವನ್ಯಪ್ರಾಣಿಗಳು ಇರುವಂತಹ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ರಸ್ತೆ ಬದಿಗಳಲ್ಲಿ ವನ್ಯಪ್ರಾಣಿಗಳು ಸಂಚರಿಸುವ ಬಗ್ಗೆ ಮಾಹಿತಿಯನ್ನು ನಾಮಫಲಕಗಳ ಮೂಲಕ ಅಳವಡಿಸಲಾಗಿದ್ದರೂ, ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದ್ದರೂ ಕೆಲ ಪ್ರದೇಶಗಳಲ್ಲಿ ರಾತ್ರಿಯ ವೇಳೆ ದೀಪದ ವ್ಯವಸ್ಥೆ ಇಲ್ಲದೇ ಇರುವುದರಿಂದ ವನ್ಯಪ್ರಾಣಿಗಳು ಕೆಲವೊಮ್ಮೆ ಮೋಟಾರು ವಾಹನಗಳಿಂದ ಬರುವ ಬೆಳಕಿನಿಂದ ಗಾಬರಿಗೊಂಡು ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ಓಡುವ ಸಮಯದಲ್ಲಿ ಕೆಲವೊಮ್ಮೆ ಅಪಘಾತ ಉಂಟಾಗುತ್ತದೆ ಹಾಗೂ ವಾಹನ ಚಾಲಕರ ನಿರ್ಲಕ್ಷ್ಯತನದಿಂದ ಅಪಘಾತವಾಗಿರುತ್ತದೆ.</td></tr>
<tr><td>ಉ)</td><td>2021 ರ ಏಪ್ರಿಲ್ ಮಾಹೆಯಲ್ಲಿ ಚಿತ್ರದುರ್ಗದ ಮೊಣಕಾಲ್ಮೂರು ವಲಯದ ಬಿ.ಜಿ ಕೆರೆ ಶಾಖೆಯ ದೇವರಗುಡ್ಡ ಗಸ್ತಿನ ವ್ಯಾಪ್ತಿಯ ಬಳ್ಳಾರಿ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟ ವನ್ಯಜೀವಿ ಯಾವುವು; (ವಿವರವಾದ ಮಾಹಿತಿ ನೀಡುವುದು)</td><td>ಚಿತ್ರದುರ್ಗ ವಿಭಾಗದ ಮೊಣಕಾಲ್ಮೂರು ವಲಯದ ಬಿ.ಜಿ. ಕೆರೆ ಶಾಖೆಯ ದೇವರಗುಡ್ಡ ಗಸ್ತಿನ ವ್ಯಾಪ್ತಿಯ ಬಳ್ಳಾರಿ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಪಘಾತದಲ್ಲಿ ಎರಡು ಗಂಡು ಕರಡಿಗಳು ಮೃತಪಟ್ಟಿರುವುದು ವರದಿಯಾಗಿದ್ದು, ಸದರಿ ಪ್ರಕರಣವಾರು ವಿವರ ಕೆಳಕಂಡಂತಿದೆ.<br>1. ಮೊಳಕಾಲ್ಮೂರು ವಲಯದ ಸಂತೆಬಂಡೆ ಗಸ್ತಿನಲ್ಲಿ ಬಳ್ಳಾರಿಯಿಂದ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಗಂಡು ಕರಡಿ ಮೃತಪಟ್ಟಿರುತ್ತದೆ.<br>2. ಒಂದು ಗಂಡು ಕರಡಿಯು ದೇವರಗುಡ್ಡ ಗಸ್ತಿನ ಬಳ್ಳಾರಿಯಿಂದ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಹಾನಗಲ್ ಗ್ರಾಮದ ಬಳಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತದೆ.</td></tr>
<tr><td>ಊ)</td><td>ಯಾವುದೇ ತಪ್ಪು ಮಾಡದ ಕಾರಿನ ಚಾಲಕ ಹಾಗೂ ಕಾರನ್ನು ಬಂಧಿಸಿರುವುದು ನ್ಯಾಯ ಸಮ್ಮತವೇ ಹಾಗಾದರೆ ರಾಜ್ಯದಲ್ಲಿ ಈ ರೀತಿ ಎಷ್ಟು ಪ್ರಕರಣಗಳು ಕಳೆದ 3 ವರ್ಷಗಳಲ್ಲಿ ಜರುಗಿವೆ; (ವಿವರವಾದ ಮಾಹಿತಿ ನೀಡುವುದು)</td><td>ಅಪಘಾತವು ವಾಹನ ಚಾಲಕನ ನಿರ್ಲ್ಯಕ್ಷದಿಂದ ಜರುಗಿದ್ದರೆ ಅದಕ್ಕೆ ತಕ್ಕಂತೆ ಕಾನೂನಿನ ಕ್ರಮ ಜರುಗಿಸಬೇಕಾಗಿದ್ದು ಅನಿವಾರ್ಯವಾಗುತ್ತದೆ. ತನಿಖೆಯಲ್ಲಿ ಮೇಲ್ನೋಟಕ್ಕೆ ಅಪಘಾತವು ಒಂದು ಕಾಕತಾಳೀಯ ಘಟನೆ, ಅದನ್ನು ತಪ್ಪಿಸಲು ವಾಹನ ಚಾಲಕ ಎಲ್ಲ ಪ್ರಯತ್ನಗಳನ್ನು ಮಾಡಿದ್ದಾನೆ ಎನ್ನುವುದು ಕಂಡು ಬಂದರೆ ಅದರಂತೆ ವರದಿ ಸಲ್ಲಿಸಿ ಪ್ರಕರಣವನ್ನು ಮುಕ್ತಾಯ ಮಾಡಲಾಗುವುದು. ವನ್ಯಜೀವಿಗಳು ಅಪಘಾತದಲ್ಲಿ ಮರಣ ಹೊಂದಿದರೆ ಪ್ರಕರಣ ದಾಖಲಿಸಿ ಮೇಲಿನಂತೆ ಕ್ರಮವಹಿಸುವುದು ನಿಯಮಗಳಂತೆ ಅನಿವಾರ್ಯವಾಗಿದೆ. ವಾಹನ ಚಾಲಕನ ತಪ್ಪು ಏನೂ ಇಲ್ಲ ಎಂದು ಕಂಡು ಬಂದ ಪ್ರಕರಣಗಳಲ್ಲಿ ಅನವಶ್ಯಕ ತೊಂದರೆ ನೀಡಿರುವ ಪ್ರಕರಣಗಳು ಇರುವುದಿಲ್ಲ.</td></tr>
</table>

ಸಂಖ್ಯೆ: ಅಪಜೀ 164 ಎಫ್‌ಎಫ್ 2021

**(ಉಮೇಶ್ ವಿ. ಕತ್ತಿ)**
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು